# ಕರ್ನಾಟಕ ಲೋಕಾಯುಕ್ತ

ಸಂಖ್ಯೆ.ಉಪಲೋಕ್/ಎಂವೈಎಸ್-553/2017/ಎಆರ್ಇ-6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ:15/07/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀಮತಿ.ರೂಪ ಎಂ.ಜೆ, ಸಹಾಯಕ ಆಯುಕ್ತರು, ಕೊಳ್ಳೇಗಾಲ ಉಪವಿಭಾಗ, ಚಾಮರಾಜನಗರ ಜಿಲ್ಲೆ, 2) ಶ್ರೀ.ಕೆ.ಸಿದ್ದು, ತಹಸೀಲ್ದಾರ್, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಹಾಗೂ 3) ಶ್ರೀ.ರೇವಣ್ಣ, ಕಂದಾಯ ನಿರೀಕ್ಷಕ, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ.ಎನ್.ಶಿವಸ್ವಾಮಿ ಬಿನ್ ಲೇಟ್ ನಾಗಮಲ್ಲಪ್ಪ, ಶಿವಾರ್ಚಕರು, ತೋಟದ ಮನೆ, ತೆರಕಣಾಂಬಿ ಹೋಬಳಿ, ವಡ್ಡಗೆರೆ ಗ್ರಾಮ ಮತ್ತು ಅಂಚೆ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, 1) ಶ್ರೀಮತಿ.ರೂಪ ಎಂ.ಜೆ, ಸಹಾಯಕ ಆಯುಕ್ತರು, ಕೊಳ್ಳೇಗಾಲ ಉಪವಿಭಾಗ, ಚಾಮರಾಜನಗರ ಜಿಲ್ಲೆ, 2) ಶ್ರೀ.ಕೆ.ಸಿದ್ದು, ತಹಸೀಲ್ದಾರ್, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಹಾಗೂ 3) ಶ್ರೀ.ರೇವಣ್ಣ, ಕಂದಾಯ ನಿರೀಕ್ಷಕ, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಸಲ್ಲಿಸಿ, ದೂರಿನ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2) ದೂರುದಾರರು ತಮ್ಮ ದೂರಿನಲ್ಲಿ, ತೆರೆಕಣಾಂಬಿ ವಡ್ಡಗೆರೆ ಗ್ರಾಮದ ಸ.ನಂ.1, 2, 122, 121, 113, 112, 110, 100ರ ಮೂಲಕ ಹಾದುಹೋಗುವ ಗ್ರಾಮ ನಕಾಶೆಯಲ್ಲಿರುವಂತೆ ಕಾಲು ದಾರಿಯನ್ನು ಬಿಡಿಸಿಕೊಡಬೇಕಾಗಿ ಎದುರುದಾರರನ್ನು ಕೋರಿಕೊಂಡರೂ, ಇದುವರೆವಿಗೂ ಕಾನೂನು ರೀತ್ಯ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

3) 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ವಡ್ಡಗೆರೆ ಗ್ರಾಮದ ಸ.ನಂ.1, 2, 122, 121, 113, 112, 110 ಹಾಗೂ 100 ಗಳಿಗೆ ಸಂಬಂಧಿಸಿದಂತೆ ಗ್ರಾಮ ನಕಾಶೆಯಂತೆ ಇರುವ ಕಾಲುದಾರಿಯನ್ನು ಬಿಡಿಸಿಕೊಡಬೇಕಂದು ದೂರು ಸಲ್ಲಿಸಿದ ಮೇರೆಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿದ ತಹಸೀಲ್ದಾರರು ದಿ:12-5-2015 ರಂದು ಒತ್ತುವರಿಯಾಗಿರುವುದನ್ನು ತೆರವುಗೊಳಿಸಿ ಗಡಿ ಗುರುತಿಸಲಾಗಿರುತ್ತದೆ. ತೆರವುಗೊಳಿಸಿದ ಬಗ್ಗೆ ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ದಿ:16-5-2015 ರಂದು ಪ್ರಕಟಗೊಂಡಿರುತ್ತದೆ. ಒತ್ತುವರಿಯಾದ ಕಾಲುದಾರಿಯನ್ನು ಗ್ರಾಮ ನಕಾಶೆಯಂತೆ ತೆರವುಗೊಳಿಸಿರುವುದಾಗಿ ನಿವೇದಿಸಿಕೊಂಡಿದ್ದಾರೆ.

4) ಪೊಲೀಸ್ ನಿರೀಕ್ಷಕರು, ಕ.ಲೋ., ಚಾಮರಾಜನಗರ, ರವರಿಂದ ವರದಿಯನ್ನು ಕೇಳಲಾಯಿತು. ಅದರಂತೆ, ಪೊಲೀಸ್ ನಿರೀಕ್ಷಕರು, ಕ.ಲೋ., ಚಾಮರಾಜನಗರ, ರವರು ದಿ:6-4-2021 ರಂದು ವರದಿಯನ್ನು ಸಲ್ಲಿಸಿ, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ತಾನು ಹಾಗೂ ಕಚೇರಿಯ ಸಿಬ್ಬಂದಿಗಳು, ಶ್ರೀ.ರೇವಣ್ಣ, ರಾಜಸ್ವ ನಿರೀಕ್ಷಕರು, ತೆರಕಣಾಂಬಿ ಹೋಬಳಿ, ಶ್ರೀ.ಸಂತೋಷ, ಗ್ರಾಮಲೆಕ್ಕಿಗರು, ವಡ್ಡರಗೆರೆ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು ಹಾಗೂ ದೂರುದಾರರೊಂದಿಗೆ ನಕಾಶೆಯಲ್ಲಿರುವ ಆರೋಪಿತ ಸ್ಥಳ ಹೆಗ್ಗವಾಡಿ ಗ್ರಾಮದಿಂದ ಗೌಡೀಕಟ್ಟೆಗೆ ಹಾದುಹೋಗುವ ಕಾಲುದಾರಿಯ ಜಮೀನುಗಳ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ಮಾಡಿರುತ್ತೇನೆ. ನಕಾಶೆಯಲ್ಲಿರುವಂತೆ ವಡ್ಡರಗೆರೆ ಗ್ರಾಮದ ಸರ್ವೇ ನಂಬರುಗಳ ಜಮೀನು ಮಾಲೀಕರು ಸರ್ಕಾರಿ ಕಾಲುದಾರಿ ಒತ್ತುವರಿ ಮಾಡಿಕೊಂಡು, ಸಾರ್ವಜನಿಕರಿಗೆ ತಿರುಗಾಡಲು ಬಿಡದೆ ತಮ್ಮ ಅನುಕೂಲಕ್ಕೆ ತಕ್ಕಂತೆ ಕಾಲುದಾರಿಯನ್ನು ಬಿಟ್ಟಿರುವುದು ಕಂಡುಬಂದಿರುತ್ತದೆ. ಅಲ್ಲಿ ಕೆಲವು ಜಮೀನು ಮಾಲೀಕರು ಪ್ರಸ್ತುತ ವ್ಯವಸಾಯ

ಮಾಡುತ್ತಿರುವುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಅಲ್ಲದೆ, ಈ ಹಿಂದೆ ರಾಜಸ್ವ ನಿರೀಕ್ಷಕರು, ದಿ:6-2-2019 ರಂದು ಸಲ್ಲಿಸಿಕೊಂಡಿರುವ ವರದಿಯು ಸುಳ್ಳಾಗಿದ್ದು, ಪ್ರಸ್ತುತ ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ ಎಂದು ತಿಳಿಸಿದ್ದಾರೆ.

5) ಶ್ರೀ.ರೇವಣ್ಣ, ರಾಜಸ್ವ ನಿರೀಕ್ಷಕರು, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ, ರವರನ್ನು 3ನೇ ಎದುರುದಾರರನ್ನಾಗಿ ಸೇರಿಸಿಕೊಂಡು, ಸದರಿಯವರಿಂದ ದೂರು ಹಾಗೂ ತನಿಖಾ ವರದಿಯ ಮೇಲೆ ಆಕ್ಷೇಪಣೆಯನ್ನು ಕೇಳಲಾಯಿತು.

6) 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಸರ್ಕಾರಿ ಕಾಲುದಾರಿಯನ್ನು ಈ ಹಿಂದೆ ತೆರವುಗೊಳಿಸಲಾಗಿದ್ದರೂ ಸಹ, ಕೆಲವು ಖಾತೆದಾರರು ಮತ್ತು ಒತ್ತುವರಿ ಮಾಡಿಕೊಂಡು ತಮಗೆ ಅನುಕೂಲಕ್ಕೆ ತಕ್ಕಂತೆ ದಾರಿಯನ್ನು ಬಿಟ್ಟಿರುತ್ತಾರೆ. ಆದ್ದರಿಂದ, ತಮಗೆ ಇನ್ನೊಂದು ಅವಕಾಶ ಕೊಟ್ಟರೆ ತಮ್ಮ ಇಲಾಖೆ ವತಿಯಿಂದ ಕಾಲುದಾರಿಯನ್ನು ತೆರವುಗೊಳಿಸುತ್ತೇನೆ ಹಾಗೂ ತಾನು ದಿ:31-7-2021 ರಂದು ವಯೋನಿವೃತ್ತಿ ಹೊಂದಿರುತ್ತೇಂದು ನಿವೇದಿಸಿಕೊಂಡಿದ್ದಾರೆ.

7) ಮುಂದುವರೆದು, 3ನೇ ಎದುರುದಾರರು ದಿ:16-8-2021 ರಂದು ತಮ್ಮ ಆಕ್ಷೇಪಣೆಯಲ್ಲಿ, ತಾವು ನಿವೃತ್ತಿಯಾಗಿರುವುದರಿಂದ ತಮ್ಮ ಇಲಾಖಾ ವತಿಯಿಂದ ಕಾಲುದಾರಿಯನ್ನು ತೆರವುಗೊಳಿಸುವ ಪ್ರಶ್ನೆಯೇ ಬರುವುದಿಲ್ಲ. ತನಿಖಾಧಿಕಾರಿಗಳು ನೀಡಿದ ವರದಿಯ ಪ್ರಕಾರ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆಂದು ಹೇಳಿದ್ದರಿಂದ ಮತ್ತು ಈಗಾಗಲೇ ದೂರಿನ ಸಂ.ಲೋಕ್/ಎಂ.ವೈ.ಎಸ್/8189/2015ರ ಪ್ರಕರಣದಲ್ಲಿ ದಿ:22-4-2015 ರಂದು ಚಾಮರಾಜನಗರ ಕ್ಯಾಂಪ್‌ಗೆ ಭೇಟಿ ನೀಡಿದಾಗ ಅದರಲ್ಲಿ ಆದೇಶವನ್ನು ಮಾಡಿದ್ದು, ಆದೇಶದಲ್ಲಿ ಉಪವಿಭಾಗಾಧಿಕಾರಿ, ಕೊಳ್ಳೇಗಾಲ, ಇವರು ಹಾಜರಾಗಿ ತಾನು, ತಹಸೀಲ್ದಾರ್, ಗುಂಡ್ಲುಪೇಟೆ ಇವರಿಗೆ ದೂರುದಾರರು ಸಲ್ಲಿಸಿದ ದೂರಿನ ಬಗ್ಗೆ ವಿಚಾರಣೆ ಮಾಡಲು ನಿರ್ದೇಶನ ನೀಡಿ ಒಂದು ತಿಂಗಳಲ್ಲಿಯೇ ಬಗೆಹರಿಸುತ್ತೇವೆಂದು ಹೇಳಿದ್ದು, ಒಂದುವೇಳೆ ತಹಸೀಲ್ದಾರ್ ರವರು 15 ದಿನಗಳೊಳಗಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ,

ದೂರುದಾರರಿಗೆ ಈ ಸಂಸ್ಥೆಗೆ ದೂರನ್ನು ಸಲ್ಲಿಸಲು ತಿಳಿಸಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

8) ದಿ:20-1-2022 ರಂದು ಉಪವಿಭಾಗಾಧಿಕಾರಿ, ಕೊಳ್ಳೇಗಾಲ, ರವರು ವರದಿಯನ್ನು ಸಲ್ಲಿಸಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ತಹಸೀಲ್ದಾರ್, ಗುಂಡ್ಲುಪೇಟೆ ರವರ ವರದಿಯಂತೆ ತೆರಕಣಾಂಬಿ ಹೋಬಳಿ ವಡ್ಡಗೆರೆ ಗ್ರಾಮದ ಸ.ನಂ.1, 2, 122, 121, 113, 112, 110 ಹಾಗೂ 100 ರಲ್ಲಿ ಗ್ರಾಮ ನಕಾಶೆಯಂತೆ ಹಾದುಹೋಗಿರುವ ಕಾಲುದಾರಿಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ದೂರು ಸಲ್ಲಿಸಿದ ಸಂಬಂಧ ದಿ:6-1-2022 ರಿಂದ ರಾಜಸ್ವ ನಿರೀಕ್ಷಕರು, ತಾಲ್ಲೂಕು ಭೂಮಾಪಕರು ಮತ್ತು ಪೊಲೀಸ್ ಸಿಬ್ಬಂದಿಯೊಂದಿಗೆ ಖುದ್ದು ಸ್ಥಳ ಪರಿಶೀಲಿಸಲಾಗಿ ಗ್ರಾಮ ನಕಾಶೆಯಂತೆ ಹಾದುಹೋಗಿರುವ 8 ಅಡಿ, ಕಾಲುದಾರಿ ಕಿರಿದಾಗಿದ್ದು ಮತ್ತು ಅಂಕುಡೊಂಗಾಗಿದ್ದು, ಕೃಷಿ ಉತ್ಪನ್ನವನ್ನು ಸಾಗಿಸಲು ತೊಂದರೆಯಾಗಿರುವ ಕಾರಣದಿಂದ ಬದಲಾಗಿ 12 ಅಡಿ ಅಗಲದ ದಾರಿಯನ್ನು ಸಾರ್ವಜನಿಕರು ತಿರುಗಾಡಲು ಮೇಲ್ಕಂಡ ಸರ್ವೇ ನಂಬರಿನ ಖಾತೆದಾರರು ಬಿಟ್ಟಿರುತ್ತಾರೆ. ದಿ:3-6-2019 ರಂದು ಸದರಿ ಸಾರ್ವಜನಿಕರು ತಿರುಗಾಡುವ ರಸ್ತೆಯನ್ನು ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬದಲಿ ರಸ್ತೆ ನಿರ್ಮಾಣ ಆಗಿರುತ್ತದೆ. ಕಾಲುದಾರಿಯನ್ನು ಒತ್ತುವರಿ ಮಾಡಿರುವ ಖಾತೆದಾರರು ನಕಾಶೆಯಂತೆ ಕಾಲುದಾರಿ ಬದಲಾಗಿ ತಮ್ಮ ಜಮೀನಿನಲ್ಲಿ ಒಂದು ಭಾಗದಲ್ಲಿ 2 ಅಡಿ ಅಗಲದ ರಸ್ತೆಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟಿರುತ್ತಾರೆ ಹಾಗೂ ಸದರಿ ರಸ್ತೆಯನ್ನು ಗ್ರಾಮಸ್ಥರು ಉಪಯೋಗಿಸುತ್ತಿದ್ದು, ಗ್ರಾಮಸ್ಥರಿಂದ ತಕರಾರು ಇರುವುದಿಲ್ಲ ಎಂದು ತಿಳಿಸಿದ್ದಾರೆ.

9) ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಕೊಳ್ಳೇಗಾಲ, ರವರು ನೀಡಿರುವ ವರದಿ ಸಂ.ಎಲ್ಎನ್‌ಡಿ:ಸಿಆರ್:91/2021-22, ದಿ:12-1-2022 ಸುಳ್ಳಾಗಿರುತ್ತದೆ. ದಿ:11-1-2022 ರಂದು ತಹಸೀಲ್ದಾರ್, ಗುಂಡ್ಲುಪೇಟೆ ರವರು ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ರವರಿಗೆ ನೀಡಿದ ವರದಿಯೂ ಸಹ ಸುಳ್ಳಾಗಿರುತ್ತದೆ. ದಿ:11-1-2022 ರಂದು ತಹಸೀಲ್ದಾರ್ ರವರು ನೀಡಿರುವ ವರದಿಯ ಪ್ರಕಾರ, ತಹಸೀಲ್ದಾರ್ ರವರ ಸಮ್ಮುಖದಲ್ಲಿ ಸರ್ಕಾರಿ ಗೌಡಿಕಟ್ಟೆಯಿಂದ ಹೆಗ್ಗವಾಡಿ ಗ್ರಾಮಕ್ಕೆ ಹಾದು ಹೋಗುವ ನಕಾಶೆ ಕಂಡಂತೆ ಸರ್ಕಾರಿ ಕಾಲು ದಾರಿಯನ್ನು ಅಕ್ರಮವಾಗಿ ಒತ್ತುವರಿ

ಮಾಡಿಕೊಂಡು ಬೆಳೆ ಬೆಳೆಯುತ್ತಿದ್ದೇವೆಂದು ಸ್ಥಳ ಪರಿಶೀಲನೆಗೆ ಬಂದಿದ್ದ ತಹಸೀಲ್ದಾರ್ ರವರ ಸಮ್ಮುಖದಲ್ಲಿ ಸ.ನಂ.1,7,122,121,113,112,110 ಮತ್ತು 100ರ ಖಾತೆದಾರರು ಬೆಳೆ ಬೆಳೆಯುತ್ತಿದ್ದೇವೆಂದು ಒಪ್ಪಿಕೊಂಡಿರುತ್ತಾರೆ. ಸದರಿ ಸರ್ವೇ ನಂಬರ್‌ಗಳ ಜಮೀನಿನಲ್ಲಿ ಯಾವುದೇ ನಕಾಶೆ ಕಂಡಂತೆ ಕಾಲುದಾರಿ ಬಿಟ್ಟಿರುವುದಿಲ್ಲ ಎಂದು ಸ್ಪಷ್ಟವಾಗಿರುತ್ತದೆ. ಮೇಲ್ಕಂಡ ಖಾತೆದಾರರು ಅಕ್ರಮ ಕಾಲುದಾರಿಯಲ್ಲಿ ಬೆಳೆ ಬೆಳೆಯುತ್ತಿದ್ದರೂ ಸಹ ಕಂದಾಯ ಇಲಾಖೆ ಅಧಿಕಾರಿಗಳು ಯಾವುದೇ ಶಿಸ್ತು ಕ್ರಮ ಕೈಗೊಳ್ಳದೇ ಮೌನವಾಗಿರುತ್ತಾರೆ. ಕಂದಾಯ ಇಲಾಖೆಯ ಅಧಿಕಾರಿಗಳು ತಮ್ಮ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ. ರಾಜಸ್ವ ನಿರೀಕ್ಷಕರು, ನಾಡ ಕಚೇರಿ, ತೆರಕಣಾಂಬಿ ರವರು ದಿ:7-1-2022 ರಂದು ನೀಡಿರುವ ವರದಿಯು ಸುಳ್ಳಾಗಿರುತ್ತದೆ. ಗ್ರಾಮ ಲೆಕ್ಕಾಧಿಕಾರಿಗಳ ವರದಿಯ ಪ್ರಕಾರ ಕಾಲು ದಾರಿ ಒತ್ತುವರಿದಾರರು ಸರ್ಕಾರಿ ಕಾಲು ದಾರಿಯನ್ನು ಅಕ್ರಮವಾಗಿ ಪ್ರವೇಶ ಮಾಡಿ ಬೆಳೆ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಆದರೆ, ಸದರಿ ಜಮೀನುಗಳಲ್ಲಿ ನಕಾಶೆ ಕಂಡಂತೆ ಕಾಲು ದಾರಿಯನ್ನು ಬಿಟ್ಟಿರುವುದಿಲ್ಲ. ವಡ್ಡಗೆರೆ ಗ್ರಾಮಸ್ಥರ ಮಹಜರಿನ ಹೇಳಿಕೆಯ ಪ್ರಕಾರ ಸರ್ಕಾರಿ ಗೌಡಿಕಟ್ಟೆಯಿಂದ ಹೆಗ್ಗವಾಡಿ ಗ್ರಾಮಕ್ಕೆ ಹಾದು ಹೋಗಿರುವ ನಕಾಶೆಯಲ್ಲಿರುವಂತೆ ಕಾಲುದಾರಿಯನ್ನು ಬಿಟ್ಟಿರುವುದಿಲ್ಲ. ಸ.ನಂ.114 ರಲ್ಲಿ ತಮ್ಮ ಸ್ವಂತಕ್ಕಾಗಿ ಓಡಾಡಲು ತಾತ್ಕಾಲಿಕ ರಸ್ತೆಯನ್ನು ಬಿಟ್ಟುಕೊಂಡಿರುತ್ತಾರೆ. ಸದರಿ ತಾತ್ಕಾಲಿಕ ರಸ್ತೆಗೂ ನಕಾಶೆ ಕಂಡಂತೆ ಇರುವ ಸಾರ್ವಜನಿಕ ಸರ್ಕಾರಿ ಕಾಲುದಾರಿಗೂ ಯಾವುದೇ ಸಂಬಂಧವಿಲ್ಲ. ಸದರಿ ತಾತ್ಕಾಲಿಕ ರಸ್ತೆಗೆ ಹೋಗಬೇಕಾದರೆ ಸದರಿ ಸರ್ಕಾರಿ ಕಾಲುದಾರಿಯಿಂದಲೇ ಹೋಗಬೇಕು, ಬೇರೆ ಮಾರ್ಗ ಇರುವುದಿಲ್ಲ, ವಿನಾಕಾರಣ ಕಂದಾಯ ಇಲಾಖೆಯ ಅಧಿಕಾರಿಗಳು ದಾರಿ ತಪ್ಪಿಸುವ ಕೆಲಸ ಮತ್ತು ಸುಳ್ಳು ಮಾಹಿತಿಯನ್ನು ನೀಡುತ್ತಿದ್ದಾರೆ. 2015 ರಲ್ಲಿ ಕಾಲುದಾರಿ ತೆರವುಗೊಳಿಸುವಂತೆ ಆದೇಶ ನೀಡಿದ್ದು, ತದನಂತರ ಕಂದಾಯ ಅಧಿಕಾರಿಗಳು ತಮ್ಮ ಕರ್ತವ್ಯಕ್ಕೆ ಕಂಟಕ ಬರಬಹುದು ಎಂಬ ಆತಂಕದಿಂದ ಸುಳ್ಳು ವರದಿಯನ್ನು ಸೃಷ್ಟಿ ಮಾಡಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ನ್ಯಾಯಾಲಯಕ್ಕೆ ವರದಿ ನೀಡಿರುತ್ತಾರೆ. ಈ ಅಂಶವು ತಾವು ನಮಗೆ ನೀಡಿರುವ ಸಂಪೂರ್ಣ ವರದಿಯನ್ನು ತಿಳಿದ ನಂತರ ಮತ್ತೆ 2ನೇ ಬಾರಿ ಕಾಲು ದಾರಿ ತೆರವುಗೊಳಿಸುವಂತೆ ದೂರು ಸಲ್ಲಿಸಿರುತ್ತೇನೆ. ಸದರಿ ಸರ್ಕಾರಿ ಕಾಲು ದಾರಿಯನ್ನು ತೆರವುಗೊಳಿಸುವಂತೆ ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರಿಗೆ ಮನವಿ ಮತ್ತು ತಮ್ಮ

ಆದೇಶವನ್ನು ನೀಡಿದ್ದು, ಯಾವುದೇ ಪ್ರಯೋಜನ ಆಗಿರುವುದಿಲ್ಲ, ಆದ್ದರಿಂದ, ಸುಳ್ಳಿನ ವರದಿಯನ್ನು ವಜಾಗೊಳಿಸಿ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಂಡು, ಸರ್ಕಾರಿ ಸಾರ್ವಜನಿಕ ನಕಾಶೆ ಕಾಲುದಾರಿಯನ್ನು ತೆರವುಗೊಳಿಸಿಕೊಡಬೇಕೆಂದು ಕೋರಿದ್ದಾರೆ.

10) ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಒತ್ತುವರಿಯನ್ನು ತೆರವುಗೊಳಿಸಿರುವುದಾಗಿ ಎದುರುದಾರರು ಆಕ್ಷೇಪಣೆಯಲ್ಲಿ ನಿವೇದಿಸಿಕೊಂಡಿದ್ದರೂ ಸಹ, ಪ್ರಸ್ತುತ ರೈತರು ದಾರಿಯನ್ನು ಒತ್ತುವರಿ ಮಾಡಿ ಬೆಳೆ ಬೆಳೆದಿದ್ದಾರೆಂದು ದೂರುದಾರರು ನಿವೇದಿಸಿಕೊಂಡಿದ್ದಾರೆ. ಎದುರುದಾರರು ದಾರಿ ಇರುವ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿದರೆ, ದೂರುದಾರರು ಬೆಳೆ ಬೆಳೆದಿದ್ದಾರೆಂದು ಫೋಟೋಗಳನ್ನು ಹಾಜರುಪಡಿಸಿದ್ದಾರೆ. ದಾರಿಯ ಪ್ರಸ್ತುತ ಹಂತದ ಬಗ್ಗೆ ಉಪಾಧೀಕ್ಷಕರು, ಕ.ಲೋ, ಚಾಮರಾಜನಗರ, ರವರಿಂದ ವರದಿಯನ್ನು ತರಿಸಿಕೊಳ್ಳಲಾಯಿತು.

11) ಪೊಲೀಸ್ ಉಪಾಧೀಕ್ಷಕರು, ಕ.ಲೋ, ಚಾಮರಾಜನಗರ ರವರು ದಿ:16-6-2022ರ ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ;

> "ದಿ:10.06.2022 ರಂದು ತಾನು ಹಾಗೂ ತಹಶೀಲ್ದಾರ್, ತಾಲ್ಲೂಕು ಸರ್ವೇಯರ್, ರೆವಿನ್ಯೂ ಇನ್ಸ್‌ಪೆಕ್ಟರ್ ಹಾಗೂ ಗ್ರಾಮ ಲೆಕ್ಕಾಧಿಕಾರಿಯವರ ಸಮಕ್ಷಮ ಸದರಿ ಸ್ಥಳ ಪರಿಶೀಲನೆ ಸಮಯದಲ್ಲಿ ಹಾಜರಿದ್ದ ಸದರಿ ಗ್ರಾಮದ ರೈತರುಗಳು, ಪಹಣಿದಾರರು ಹಾಗೂ ಸಾರ್ವಜನಿಕರು. ತಹಶೀಲ್ದಾರ್ ಮತ್ತು ಅವರ ಸಿಬ್ಬಂದಿಯವರು ಆಗಾಗ್ಗೆ ಬಂದು ನಕಾಶೆ ರಸ್ತೆಯನ್ನು ತೆರವುಗೊಳಿಸಿರುವ ಬಗ್ಗೆ ಮಾಹಿತಿ ತಿಳಿಸಿದ್ದು, ಆದರೆ ನಾವೆಲ್ಲರು ಹೊಸದಾಗಿ ಇತ್ತೀಚೆಗೆ ನಿರ್ಮಾಣವಾಗಿರುವ ರಸ್ತೆಯನ್ನು ನಾವು ನಮ್ಮ ದೈನಂದಿನ ಕರ್ತವ್ಯಕ್ಕೆ ಉಪಯೋಗಿಸುತ್ತಿರುವುದರಿಂದ ಹಾಗೂ ನಾವುಗಳು ಉಳುಮೆ ಮಾಡಲು ಹಾಗೂ ಇತರೆ ಕೆಲಸಗಳಿಗೆ ಟ್ರ್ಯಾಕ್ಟರ್, ಎತ್ತಿನಗಾಡಿ ಹಾಗೂ ಇತರೆ ವಾಹನಗಳನ್ನು ತೆಗೆದುಕೊಂಡು ಹೋಗಲು ಅನುಕೂಲಕರವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ನಕಾಶೆ ಕಂಡ ರಸ್ತೆಯು ಕೇವಲ 8 ಅಡಿ ಇರುವುದರಿಂದ

ಸದರಿ ರಸ್ತೆಯಲ್ಲಿ ತಮ್ಮ ವಾಹನಗಳನ್ನು ಮತ್ತು ಉಳುಮೆ ಮಾಡುವ ವಸ್ತುಗಳನ್ನು ತಮ್ಮ ಜಮೀನಿಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ತಾವು ನಕಾಶೆ ಕಂಡ ರಸ್ತೆಯನ್ನು ಉಪಯೋಗಿಸುತ್ತಿರುವುದಿಲ್ಲ ಇಲಾಖೆಯವರು ಬಂದು ರಸ್ತೆ ಮಾಡಿದರೂ ತಾವು ಬಳಕೆ ಮಾಡದಿರುವುದರಿಂದ ನಕಾಶೆ ದಾರಿ ಮುಚ್ಚಿಹೋಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಸ್ಥಳದ ಪರಿಶೀಲನೆ ಸಮಯದಲ್ಲಿ ಸ.ನಂ:7/3 ರಲ್ಲಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ನಕಾಶೆ ರಸ್ತೆ ಕುರುಹು ಇದ್ದು ಜಮೀನಿನ ಮುಖ್ಯ ರಸ್ತೆ ಇರುವುದಿಲ್ಲ, ಜೊತೆಗೆ ಜಮೀನಿನ ಪಹಣಿದಾರರು ತಮ್ಮ ಜಮೀನಿಗೆ ಹೊಂದಿಕೊಂಡಂತೆ 15 ಅಡಿ ಅಗಲದ ರಸ್ತೆಯನ್ನು ನಿರ್ಮಿಸಿಕೊಂಡಿದ್ದಾರೆ. ಸದರಿ ರಸ್ತೆ ಗೌರಿ ಕಟ್ಟೆವರೆವಿಗೂ ಇರುತ್ತದೆ. ಸಾರ್ವಜನಿಕರ ಬಳಕೆ ಇರುವುದಿಲ್ಲ.

ಸದರಿ ರಸ್ತೆಗೆ ಹೊಂದಿಕೊಂಡಂತೆ ಸ.ನಂ.7/1 ರಲ್ಲಿ ನಕಾಶೆ ಕಂಡ ರಸ್ತೆ ಇದ್ದು ಜೊತೆಗೆ ಜಮೀನುದಾರರು ತಮ್ಮ ಜಮೀನಿನ ಗಡಿಯಲ್ಲಿ ಗೌರಿಕಟ್ಟೆಗೆ ಹೊಂದಿಕೊಂಡಂತೆ 15 ಅಡಿ ಅಗಲದ ರಸ್ತೆ ಬಿಟ್ಟಿರುತ್ತಾರೆ. 15 ಅಡಿ ರಸ್ತೆಯಲ್ಲೆ ಜನರು ಅಡ್ಡಾಡುತ್ತಿದ್ದು ನಕಾಶೆ ರಸ್ತೆ ಇದ್ದರೂ ಜನ ಬಳಕೆ ಇರುವುದಿಲ್ಲ.

ಸದರಿ ರಸ್ತೆ ಮುಂದುವರೆದು ಸ.ನಂ:1/2 ರಲ್ಲಿ ನಕಾಶೆ ರಸ್ತೆ ಮುಂದುವರೆದಿರುತ್ತದೆ. ಸ.ನಂ:122/2ರಲ್ಲಿ ಪಹಣಿದಾರರು ತಮ್ಮ ಜಮೀನಿನ ಗಡಿಯಲ್ಲಿ 15 ಅಗಲದ ರಸ್ತೆ ಬಿಟ್ಟಿರುತ್ತಾರೆ. ಪ್ರಾರಂಭದಲ್ಲಿ ನಕಾಶೆ ರಸ್ತೆ ಗುರುತಿದ್ದು ಮುಂದುವರೆದು ಬಳಕೆ ಇಲ್ಲದಿರುವುದರಿಂದ ಮುಚ್ಚಿರುತ್ತದೆ.

ಸ.ನಂ:212/1 ರಲ್ಲಿ ಜಮೀನುದಾರರು ತಮ್ಮ ಗಡಿಯಲ್ಲಿ 15 ಅಡಿ ಅಗಲದ ರಸ್ತೆ ಬಿಟ್ಟಿರುತ್ತಾರೆ. ಇದರಲ್ಲಿ ಕಾಲು ಭಾಗ ನಕಾಶೆ ಕಂಡ ರಸ್ತೆ ಇರುತ್ತದೆ. ಸದರಿ ಜಮೀನಿನ ಒಳಗಡೆ ಇರುವ ನಕಾಶೆ ರಸ್ತೆಯಲ್ಲಿ ಬಳಕೆ ಮಾಡದಿದ್ದುದರಿಂದ ಜಮೀನುದಾರರು ಅದನ್ನು ಉಪಯೋಗಿಸಿಕೊಂಡಿರುತ್ತಾರೆ.

ಸ.ನಂ:113/1 ರಲ್ಲಿ ನಕಾಶೆ ಕಂಡ 8 ಅಡಿ ರಸ್ತೆ ಇರುತ್ತದೆ. ಪಹಣಿದಾರರು ಹೆಚ್ಚುವರಿಯಾಗಿ ಎರಡು ಕಡೆ 7 ಅಡಿ ಅಗಲ ರಸ್ತೆ ಬಿಟ್ಟಿರುತ್ತಾರೆ.

ಸ.ನಂ:112 ರಲ್ಲಿ ಸುಮಾರು 40 ಅಡಿ ನಕಾಶೆ ಕಂಡ ರಸ್ತೆ ಇರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಸ.ನಂ:114ರಲ್ಲಿ ರೈತರು ತಮ್ಮ ಜಮೀನುಗಳಿಗೆ ಹೋಗಲು ಖಾಸಗಿ ರಸ್ತೆ ನಿರ್ಮಿಸಿಕೊಂಡಿರುತ್ತಾರೆ. ಇದೆ ಸರ್ವೇ ನಂಬರ್ ಜಮೀನಿನ ಒಳಗಡೆ ನಕಾಶೆ ಕಂಡ ರಸ್ತೆ ಇದ್ದು ಹಾಲಿ ಬಳಕೆಯಾಗುತ್ತಿರುವುದಿಲ್ಲ. ಸದರಿ ರಸ್ತೆಯನ್ನು ಜಮೀನುದಾರರು ಬಳಕೆ ಮಾಡಿಕೊಂಡಿರುತ್ತಾರೆ. ಸರ್ವೆ ನಂ:112/1 ರಲ್ಲಿ ನಕಾಶೆಯಂತೆ ದಾರಿ ಇದ್ದು ಯಾರೂ ಬಳಕೆ ಮಾಡುತ್ತಿರುವುದಿಲ್ಲ ಅದನ್ನು ಜಮೀನುದಾರರು ಬಳಸುತ್ತಿರುತ್ತಾರೆ. ಮುಂದುವರೆದು ಸದರಿ ಜಮೀನಿನ ಗಡಿಯಲ್ಲಿ ಕರಕಲುಮಾದಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಂತೆ 15 ಅಡಿ ಅಗಲದ ರಸ್ತೆ ಇರುತ್ತದೆ.

ಸ.ನಂ:110/2, 100/1, 100/2, 100/4, 100/3ರ ಜಮೀನಿನ ಮಧ್ಯದಲ್ಲಿ ಕಾಲುದಾರಿ ರಸ್ತೆ ಹಾದು ಹೋಗಿರುತ್ತದೆ. ಆದರೆ, ರಸ್ತೆಯು ಬಳಕೆ ಇರುವುದಿಲ್ಲ ಆದುದರಿಂದ ಪಹಣಿದಾರರು ರಸ್ತೆಯನ್ನು ಉಪಯೋಗಿಸಿಕೊಂಡಿರುತ್ತಾರೆ. ಸದರಿ ಜಮೀನಿನ ಗಡಿಯಲ್ಲಿ 15 ಅಡಿ ಅಗಲದ ರಸ್ತೆ ಇರುತ್ತದೆ.

ಅರ್ಜಿದಾರರು ಸದರಿ ಗ್ರಾಮದಲ್ಲಿ ನಕಾಶೆ ಕಂಡ ರಸ್ತೆ 8 ಅಡಿ ಅಗಲ ಇರುವುದರಿಂದ ಅದು ಯಾವುದೇ ರೀತಿಯ ಸಾರ್ವಜನಿಕ ಉಪಯೋಗಕ್ಕೆ ಬಾರದೆ ಇರುವುದರಿಂದ ಹೊಸದಾಗಿ ರೈತರು ಬಿಟ್ಟಿರುವ 15 ಅಡಿ ರಸ್ತೆಯು ತುಂಬಾ ಅನುಕೂಲಕರವಾಗಿರುತ್ತದೆ. ಈ ರಸ್ತೆಯು ನಕಾಶೆ ಕಂಡ ರಸ್ತೆಯ ಪಕ್ಕದಲ್ಲಿ ಹಾದು ಹೋಗಿರುತ್ತದೆ. ಆ ರಸ್ತೆಯ ಮೂಲಕ ಅರ್ಜಿದಾರರು ತಮ್ಮದ

ಆದ ಮತ್ತೊಂದು ಜಮೀನಿಗೆ ಹೋಗಲು ಅನುಕೂಲಕರವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ನಂತರ ಸ್ಥಳದಲ್ಲಿ ಹಾಜರಿದ್ದ ಸರ್ವೇ ಅಧಿಕಾರಿಗಳು ಈ ನಕ್ಷೆಯು 1981 ರಲ್ಲಿ ಸರ್ವೇಯಾಗಿದ್ದು ಪ್ರತಿ 30 ವರ್ಷಕ್ಕೊಮ್ಮೆ ಪುನಃ ಮತ್ತೆ ಸರ್ವೇ ಮಾಡಿ ಬದಲಾವಣೆಗಳನ್ನು ಗುರುತಿಸಬೇಕಾಗಿರುತ್ತದೆ. ಆದರೆ 30 ವರ್ಷಗಳ ನಂತರ ಹೊಸದಾಗಿ ಗ್ರಾಮ ನಕ್ಷೆ ಸರ್ವೇಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸದರಿ ಸ್ಥಳ ಪರಿಶೀಲನೆಯ ಸಮಯದಲ್ಲಿ ನಕಾಶೆ ಕಂಡ ರಸ್ತೆಯು ಕೆಲವು ಜಮೀನುದಾರರ ಜಮೀನಿನ ಮಧ್ಯೆ ಹಾಗೂ ಕೆಲವು ಜಮೀನುದಾರರ ಗಡಿ ಭಾಗದಲ್ಲಿ ಹಾದು ಹೋಗಿರುತ್ತದೆ. ಸದರಿ ಜಮೀನುದಾರರು, ಸಾರ್ವಜನಿಕರು ಮತ್ತು ರೈತರ ಅನುಕೂಲಕ್ಕಾಗಿ ಹಾಗೂ ತಮ್ಮ ಬೆಳೆಗಳನ್ನು ಪ್ರಾಣಿಗಳಿಂದ ರಕ್ಷಿಸಲು ನಕಾಶೆ ರಸ್ತೆಯ ಬದಲಾಗಿ ತಮ್ಮ ಜಮೀನಿನ ಗಡಿಗಳಲ್ಲಿ 15 ಅಡಿ ಅಗಲದ ರಸ್ತೆಯನ್ನು ನಿರ್ಮಾಣ ಮಾಡಿಕೊಂಡು ಉಪಯೋಗಿಸುತ್ತಿರುವುದರಿಂದ ಹಾಗೂ ನಕಾಶೆ ಕಂಡ ರಸ್ತೆಯಲ್ಲಿ ಸಾರ್ವಜನಿಕರು ಹಾಗೂ ರೈತರು ಕೆಲವು ಕಡೆ ಉಪಯೋಗಿಸುತ್ತಿರುವುದಿಲ್ಲ.

ಮುಂದುವರೆದು, ವಡ್ಡಗೆರೆ ಗ್ರಾಮ ಪಂಚಾಯಿತಿಯ 2019-2020ನೇ ಸಾಲಿನಲ್ಲಿ ನರೇಗಾ ಯೋಜನೆಯಡಿಯಲ್ಲಿ 15 ಅಡಿ ರಸ್ತೆಯನ್ನು ನಿರ್ಮಿಸಿಕೊಂಡು ರಸ್ತೆ ಕಾಮಗಾರಿ ಮಾಡಿಕೊಂಡು ಉಪಯೋಗಿಸುತ್ತಿದ್ದಾರೆ. ಸದರಿ ರಸ್ತೆ ನಿರ್ಮಾಣ ಕಾಮಗಾರಿ ಸಮಯದಲ್ಲಿ ಈ ಬಗ್ಗೆ ಅರ್ಜಿದಾರರಿಂದಾಗಲಿ ಸ್ಥಳೀಯ ರೈತರು ಮತ್ತು ಸಾರ್ವಜನಿಕರಿಂದಾಗಲಿ ದೂರು ನೀಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ.

ನಕಾಶೆ ದಾರಿಯನ್ನು ತಹಶೀಲ್ದಾರ್/ರೆವಿನ್ಯೂ ಇನ್ಸ್‌ಪೆಕ್ಟರ್/ಗ್ರಾಮ ಲೆಕ್ಕಾಧಿಕಾರಿ ಯವರುಗಳು ಆಗಾಗ್ಗೆ ನಿರ್ಮಾಣ ಮಾಡುತ್ತಿದ್ದರೂ ಜನರ ಬಳಕೆ

ಇಲ್ಲದೆ ಇರುವುದರಿಂದ ಮುಚ್ಚಿಹೋಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ರಸ್ತೆಯ ಎರಡೂ ಬದಿ ಬೇಲಿಹಾಕುವ ಅವಶ್ಯಕತೆ ಇರುತ್ತದೆ.

ಈ ವಿಚಾರವಾಗಿ ಸದರಿ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸ್ಥಳೀಯ ಪೊಲೀಸ್ ಠಾಣೆಯ ಠಾಣಾಧಿಕಾರಿ ಮತ್ತು ತಹಶೀಲ್ದಾರ್ ರವರು ಸೇರಿ ಗ್ರಾಮದಲ್ಲಿ ಅರ್ಜಿದಾರರು ಮತ್ತು ಗ್ರಾಮದ ಜನರ ಶಾಂತಿ ಸಭೆಯನ್ನು ನಡೆಸುವ ಅವಶ್ಯಕತೆ ಇರುತ್ತದೆ."

12) ತನಿಖಾ ವರದಿಯ ಪ್ರಕಾರ ಈ ರಸ್ತೆ ಸ.ನಂ.7/3, 7/1, 1/2, ಸ.ನಂ.122/2, 212/1, 113/1, 112, 114, 112/1, 110/2, 100/1, 100/2, 100/4 ಮತ್ತು 103 ರಲ್ಲಿ ಹಾದು ಹೋಗುವುದು ಕಂಡುಬರುತ್ತದೆ.

13) ನಕಾಶೆ ಕಂಡ ರಸ್ತೆ ಉದ್ದಗಲದ ಒತ್ತುವರಿಯನ್ನು ತೆರವುಗೊಳಿಸಲು 1 ರಿಂದ 3ನೇ ಎದುರುದಾರರು ವಿಫಲವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರ ಮನವಿಯ ನಂತರ ಹಾಗೂ ಈ ಸಂಸ್ಥೆಗೆ ದೂರು ದಾಖಲಾದ ನಂತರವೂ ಸಹ ಎದುರುದಾರರು ಒತ್ತುವರಿಯಾದ ರಸ್ತೆಯನ್ನು ಬಿಡಿಸಿಕೊಡಲು ವಿಫಲರಾಗಿದ್ದಾರೆ. ಇದರೊಂದಿಗೆ ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ ಮತ್ತು ತಹಸೀಲ್ದಾರ್, ಗುಂಡ್ಲುಪೇಟೆ ರವರು ದಿ:6-1-2022 ರಂದು ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಮತ್ತು 8 ಅಡಿ ಅಗಲದ ರಸ್ತೆಯ ಬದಲಾಗಿ 12 ಅಡಿ ಅಗಲದ ರಸ್ತೆಯನ್ನು ಮೇಲ್ಕಂಡ ಜಮೀನಿನ ಖಾತೆದಾರರು ಬಿಟ್ಟುಕೊಟ್ಟಿರುತ್ತಾರೆಂದು ಸುಳ್ಳು ಮಾಹಿತಿಯನ್ನು ಈ ಸಂಸ್ಥೆಗೆ ನೀಡಿರುತ್ತಾರೆ. 2ನೇ ಎದುರುದಾರರಾದ ಶ್ರೀ.ಕೆ.ಸಿದ್ದು, ತಹಸೀಲ್ದಾರ್, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರು ದಿ:30-4-2018 ರಂದು ವಯೋನಿವೃತ್ತಿ ಹೊಂದಿರುವುದರಿಂದ ಸುಮಾರು 4 ವರ್ಷಗಳಿಗಿಂತ ಹೆಚ್ಚಿನ ಕಾಲವಾಗಿದ್ದು ಕೆ.ಸಿ.ಎಸ್.ಆರ್ ನಿಯಮ 214(2)(ಬಿ)(ii)ರ ಪ್ರಕಾರ ಸದರಿಯವರನ್ನು ಕೈಬಿಡಬಹುದಾಗಿದೆ.

14) ಮೇಲೆ ಚರ್ಚಿಸಿದ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು (ಪ್ರಸ್ತುತ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 2021)ರ ನಿಯಮ 3(1)(i)(ii) ಮತ್ತು (iii) ರನ್ವಯ 1 ಮತ್ತು 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, 1ನೇ ಎದುರುದಾರರಾದ ಶ್ರೀಮತಿ.ರೂಪ ಎಂ.ಜೆ, ಸಹಾಯಕ ಆಯುಕ್ತರು, ಕೊಳ್ಳೇಗಾಲ ಉಪವಿಭಾಗ, ಚಾಮರಾಜನಗರ ಜಿಲ್ಲೆ, ರವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ 3ನೇ ಎದುರುದಾರರಾದ ಶ್ರೀ.ರೇವಣ್ಣ, ಕಂದಾಯ ನಿರೀಕ್ಷಕ, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ರವರು ದಿ:31-7-2021 ರಂದು ವಯೋನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್‌ಆರ್ ನಿಯಮ 214(2)(ಬಿ)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

15) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

15/7/22

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.